## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.120/2022

**ಫಿರ್ಯಾದುದಾರರು : ಲಷ್ಕರ್ ಪೋಲೀಸ್ ಠಾಣೆ**

ಮತ್ತು

**ಆರೋಪಿಗಳು : ಯೋಗೇಶ್ ಮತ್ತು ಚಂದ್ರ**

### ದೋಷಾರೋಪಣೆ

ನಾನು, ಶ್ರೀಮತಿ.ಕೆ.ಭಾಗ್ಯ, ಬಿ.ಕಾಂ, ಎಲ್‌ಎಲ್‌ಬಿ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗುತ್ತಿದೆಃ

1. ಯೋಗೇಶ @ ಯೋಗಿ @ ವಿಲನ್ ಬಿನ್ ರಾಜು, 22 ವರ್ಷ, ಆಟೋ ಡ್ರೈವರ್, ವಾಸಃ 3 ನೇ ಮಹಡಿ, ನರ್ಮ್ ಮನೆ, 8 ನೇ ಬ್ಲಾಕ್, ಹಳೆಕೆಸರೆ, ಎನ್.ಆರ್.ಮೊಹಲ್ಲಾ, ಮೈಸೂರು
2. ಚಂದ್ರು @ ಚಿಕ್ಕ ಬಿನ್ ಮಹದೇವು, 25 ವರ್ಷ, ಆಟೋ ಡ್ರೈವರ್, ವಾಸಃ ಮನೆ ನಂಃ65, ಕುರಿಮಂಡಿ, ಕೆ.ಶಿವರಾಮ್ ಬಡಾವಣೆ, ಸಿ-ಬ್ಲಾಕ್, ಎನ್.ಆರ್.ಮೊಹಲ್ಲಾ, ಮೈಸೂರು.

1) ಈ ದೋಷಾರೋಪಣ ಪಟ್ಟಿಯಲ್ಲಿ ಕಂಡ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ, ದಿಃ23.01.2021 ರಂದು ರಾತ್ರಿ ಸಮಾರು 9.30 ಗಂಟೆಯಲ್ಲಿ ಚಾಸಾ-1 ಮತ್ತು 5 ರವರು ಪಾನಿಪುರಿ ತಿನ್ನಲು ಗಾಂಧಿವೃತ್ತದ ಕಡೆಗೆ ಹೋಗುತ್ತಿದ್ದಾಗ ನೀವುಗಳು ಅಲ್ಲಿದ್ದ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಮುಂಭಾಗ ಇರುವ ಫಾಸ್ಟ್ ಫುಡ್ ಹೋಟೆಲಿನಲ್ಲಿ ತಿಂಡಿ ತಿನ್ನುತ್ತಿದ್ದು, ಆಗ 2 ನೇ ಆರೋಪಿಯಾದ ನೀನು ಚಾಸಾ-1 ಮತ್ತು 5 ರವರನ್ನು ನಿನ್ನ ಹತ್ತಿರ ಕರೆದು "ನೀವು ಯಾವ ಊರು, ಎಲ್ಲಿಗೆ ಹೋಗ್ತಾ ಇದ್ದೀರಾ ಅಂತ ಕೇಳುತ್ತಿದ್ದಾಗ", 1 ನೇ ಆರೋಪಿಯಾದ ನೀನು 2 ನೇ ಆರೋಪಿಯ ಹಿಂದುಗಡೆಯಿಂದ ಬಂದು ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದುಕೊಂಡು ಪ್ರತಿಬಂಧಿಸುವ ಮೂಲಕ ಕಲಂ 341 ರೆ.ವಿ 34 ಐಪಿಸಿ ರೀತ್ಯಾ ಅಪರಾಧ ಎಸಗಿರುತ್ತೀರ ಎಂದು ಆರೋಪಣೆಯನ್ನು ಹೊರಿಸಲಾಗಿದೆ.

2) ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ದಿನ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿಯಾದ ನೀನು, ಚಾಸಾ–1 ಮತ್ತು 5 ರವರನ್ನು ಹಿಡಿದುಕೊಂಡು ಕೈಗಳಿಂದ ಹೊಡೆದು, ಜೇಬಿಗೆ ಕೈ ಹಾಕಿದಾಗ, ಚಾಸಾ–1 ಮತ್ತು 5 ರವರು ನಿಮ್ಮಿಂದ ಬಿಡಿಸಿಕೊಂಡು, ಹೋಗುತ್ತಿದ್ದಾಗ, 1 ನೇ ಆರೋಪಿಯಾದ ನೀನು ನಿನ್ನ ಆಟೋದಲ್ಲಿ ಅವರನ್ನು ಹಿಂಬಾಲಿಸಿಕೊಂಡು ಹೋಗಿದ್ದು, ಚಾಸಾ–1 ಮತ್ತು 5 ರವರು ಗಲ್ಲಿಯಲ್ಲಿ ಹೋಗಿ ಅವರ ಹೋಟೆಲಿಗೆ ಹೋಗಿ, ಅಲ್ಲಿದ್ದ ಚಾಸಾ–2, 3 ಮತ್ತು 4 ರವರಿಗೆ ನಡೆದ ವಿಚಾರ ತಿಳಿಸಿದ್ದು, ನಿಮ್ಮನ್ನು ಕೇಳೋಣ ಬನ್ನಿ ಅಂತ ಚಾಸಾ–5 ರವರನ್ನು ಹೋಟೆಲಿನಲ್ಲಿರಿಸಿ, ಚಾಸಾ–1, 2, 3, 4 ರವರು ಮೈಸೂರು ಲಷ್ಕರ್ ಮೊಹಲ್ಲಾ ಗಾಂಧಿವೃತ್ತ, ಹೋಟೆಲ್ ಆರ್.ಆರ್.ಆರ್. ಮುಂಭಾಗ ಆಟೋದಲ್ಲಿ ಕುಳಿತಿದ್ದ ನಿಮ್ಮನ್ನು ಕಂಡು, ಚಾಸಾ–2 ರವರು "ಏಕೆ ನಮ್ಮ ಹುಡುಗರಿಗೆ ಹೊಡೆದು ಮೊಬೈಲ್ ಕಿತ್ತು ಕೊಳ್ಳಲು ನೋಡಿದಿರಿ" ಅಂತ ಕೇಳಿದ್ದು, ಅದಕ್ಕೆ ನೀವುಗಳು "ಏನೋ ನನ್ ಮಕ್ಕಳ ನಮಗೆ ಹೊಡೆಯಕೆ ಬಂದಿದ್ದೀರಾ, ಬರೋ ನೋಡೋಣ" ಅಂತ ಗಲಾಟೆ ಮಾಡುತ್ತಾ, ಮಾತಿಗೆ ಮಾತು ಆಗಿ 2 ನೇ ಆರೋಪಿಯಾದ ನೀನು ಚಾಸಾ–1 ಮತ್ತು 3 ರವರಿಗೆ ಕೈಗಳಿಂದ ಹೊಡೆಯುವ ಮೂಲಕ, ನೀವುಗಳು ಕಲಂ 323 ರೆ.ವಿ. 34 ಐಪಿಸಿ ರೀತ್ಯಾ ಅಪರಾಧ ಎಸಗಿರುತ್ತೀರಾ ಎಂದು ಆರೋಪಣೆಯನ್ನು ಹೊರಿಸಲಾಗಿದೆ.

3) ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ದಿನ, ಸಮಯ ಮತ್ತು ಸ್ಥಳದಲ್ಲಿ, 2 ಆರೋಪಿಯಾದ ನೀನು, ಚಾಸಾ–1 ಮತ್ತು 3 ರವರಿಗೆ ಆಟೋದಲ್ಲಿದ್ದ ಸ್ಪ್ಯಾನರ್ ನಿಂದ ಮೈ ಕೈಗಳಿಗೆ ಹೊಡೆದು ನೋವುಂಟು ಮಾಡಿ, 1 ನೇ ಆರೋಪಿಗೆ, ಇವರನ್ನು ಬಿಡಬೇಡ ಹೊಡೆದು ಸಾಯಿಸು ಇಲ್ಲದಿದ್ದರೆ ನಮಗೆ ಏನೋ ಮಾಡುತ್ತಾರೆ ಅಂತ ಹೇಳಿದಾಗ 1 ನೇ ಆರೋಪಿಯಾದ ನೀನು, ಚಾಸಾ–4 ರವರಿಗೆ ಕೈಗಳಿಂದ ಹೊಡೆದು, ಚಾಸಾ–2 ರವರಿಗೆ ನಿನ್ನ ಬಳಿ ಇದ್ದ ಚಾಕುವಿನಿಂದ ಎಡ ಕುತ್ತಿಗೆ, ಎಡ ದವಡೆ ಭಾಗಕ್ಕೆ ಹೊಡೆದು ಕೊಯ್ದು ಗಾಯ ಮಾಡುವ ಮೂಲಕ, ಮೇಲ್ಕಂಡ ಆರೋಪಿಗಳಾದ ನೀವು ಕಲಂ 324 ರೆ.ವಿ. 34 ಐಪಿಸಿ ರೀತ್ಯಾ ಅಪರಾಧ ಎಸಗಿರುತ್ತೀರಾ ಎಂದು ಆರೋಪಣೆಗಳನ್ನು ಹೊರಿಸಲಾಗಿದೆ.

4) ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ದಿನ, ಸಮಯ ಮತ್ತು ಸ್ಥಳದಲ್ಲಿ, ಮೇಲ್ಕಂಡ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ, ಚಾಸಾ–2 ರವರ ಎಡ ಕಿಬ್ಬೊಟ್ಟೆಗೆ ಚುಚ್ಚಿ ತೀವ್ರ ಸ್ವರೂಪದ ಗಾಯಗಳುಂಟು ಮಾಡಿ ಚಾಸಾ–2 ರವರನ್ನು ಕೊಲೆ ಮಾಡಲು ಪ್ರಯತ್ನಿಸುವ ಮೂಲಕ, ಮೇಲ್ಕಂಡ ಆರೋಪಿಗಳಾದ ನೀವು ಕಲಂ 307 ರೆ.ವಿ. 34 ಐಪಿಸಿ ರೀತ್ಯಾ ಅಪರಾಧ ಎಸಗಿರುತ್ತೀರಾ ಎಂದು ಆರೋಪಣೆಗಳನ್ನು ಹೊರಿಸಲಾಗಿದೆ.

ಪ್ರಶ್ನೆ:1) ಆರೋಪಿಗಳಾದ ನಿಮ್ಮ ಮೇಲೆ ಆರೋಪಿಸಲಾದ ಮೇಲ್ಕಂಡ ದೋಷಾರೋಪಣೆಯನ್ನು ಕೇಳಿಸಿಕೊಂಡಿರುವಿರಾ ಮತ್ತು ಅರ್ಥಮಾಡಿಕೊಂಡಿರುವಿರಾ?

ಉತ್ತರಃ A1

A2

ಪ್ರಶ್ನೆ:2) ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀರಾ?

ಉತ್ತರಃ A1

A2

ದೋಷಾರೋಪಣೆಯನ್ನು ಆರೋಪಿತರಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿದ್ದು, ಮತ್ತು ಅವರು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.

ಜೂನ್ 03 ನೇ ತಾರೀಖು 2023.

**(ಕೆ.ಭಾಗ್ಯ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.